a) Minimum fixed fare from Rs. 2.50 to Rs. 2 80 and

b) Fare per Km. from Rs. 1.30 to Rs. 1.50 respectively.

This revision will be effective from today and provisional.

As regards the demand of the Autorikshaw Drivers' Union for fixing the minimum fare at Rs. 3/-, this will be considered by the Experts Committee constituted by the State Government with the Transport Commissioner as the Chairman. A Meeting of this Committee has been convened on 9th April 1990 and the Committee will give its report to Government within 30 days.

ಸಾರ್ವಜನಿಕ ಮಹತ್ವವುಳ್ಳ ವಿಷಯದ ಪ್ರಸ್ತಾವ
ಬೆಳಗಾಂ ಮಹಾನಗರ ಪಾಲಿಕೆಯ ಕಟ್ಟಡದ ಮೇಲೆ ಹಾರಾಡುತ್ತಿರುವ
ಭಗವ ಜಂಡಾವನ್ನು ತೆಗೆಯುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಬೆಳಗಾವಿ ಮಹಾನಗರ ಪಾಲಿಕೆ ಚುನಾವಣೆಯನ್ನು ಮುಂದೂಡ ಬೇಕೆಂದು ಒಂದು ವರ್ಷದಿಂದ ಕೇಳುತ್ತಿದ್ದಾರೆ.

ಅಧ್ಯಕ್ಷರು.—ಅದಕ್ಕೂಂದು ತಿದ್ದುಪಡಿ ಇಲ್ಲಿ ಬರುತ್ತಾ ಇದೆ.

ಶ್ರೀ ವಾಟಾಳ್ ನಾಗರಾಜ್.—ಬೆಳಗಾವಿಯಿಂದ ೫ ಸಾವಿರ ಜನರ ನಿಯೋಗ ಬೆಂಗಳೂರಿಗೆ ಬಂದಿದೆ. ಬೆಳಗಾವಿ ಮಹಾನಗರ ಪಾಲಿಕೆಯ ಕಟ್ಟಡದ ಮೇಲೆ ಹಾರಾಡುತ್ತಿರುವ ಭಗವ ಜಂಡಾವನ್ನು ಯಾವಾಗ ತೆಗೆಯುತ್ತೀರಿ ? ಸರ್ಕಾರದ ಪರವಾಗಿ ಉತ್ತರ ಹೇಳಬೇಕು. ಇದು ಅತ್ಯಂತ ಘೋರ ಅಪರಾಧವಾಗುತ್ತದೆ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಚುನಾವಣೆ ಮಾಡಬೇಕೆಂದು ಸರ್ಕಾರವನ್ನು ಕೇಳುತ್ತಿದ್ದಾರೆ. ಈ ಬಗ್ಗೆ ಉತ್ತರ ದೊರೆಯದಿದ್ದರೆ ನಾನು ಧರಣಿ ಮಾಡಬೇಕಾಗುತ್ತದೆ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಹಾಕಿರತಕ್ಕ ಧ್ವಜವನ್ನು ತೆಗೆಯುವ ತೀರ್ಮಾನಕ್ಕೆ ಸರ್ಕಾರ ಬರಬೇಕು. ಇಲ್ಲದಿದ್ದರೆ ನಾನು ಧರಣಿ ಕುಳಿತುಕೊಳ್ಳುತ್ತೇನೆ. ಇದು ಬಹಳ ಅನ್ಯಾಯ. ನಾನು ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇನೆ. ೫ ಸಾವಿರ ಜನ ಬೆಳಗಾವಿಯಿಂದ ರೈಲಿನಲ್ಲಿ ಬುತ್ತಿಕಟ್ಟಿಕೊಂಡು ಇಲ್ಲಿಗೆ ಬಂದಿದ್ದಾರೆ. ತಾವು ತಪ್ಪು ತಿಳಿದುಕೊಳ್ಳಬೇಡಿ.

ಅಧ್ಯಕ್ಷರು.—ನಿಮ್ಮನ್ನು ತಪ್ಪು ತಿಳಿಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನೀವು ನನ್ನಲ್ಲಿ ಆ ನಂಬಿಕೆ ಇಡಬೇಕು.

ಶ್ರೀ ವಾಟಾಳ್‌ನಾಗರಾಜ್.—ಮಾನ್ಯ ಮಂತ್ರಿಗಳಾದ ಮೊಯಿಲಿಯವರು ಅಲ್ಲಿರತಕ್ಕ ಬಾವುಟವನ್ನು ತೆಗೆಯುವ ನಿರ್ಧಾರ ತೆಗೆದುಕೊಳ್ಳುತ್ತಾರೆಯೆ ? ತಾವು ಸಹ ಹೇಳಿದ್ದೀರಿ ರಾಜ ಮಹಾರಾಜರ ಬಾವುಟಗಳೆಲ್ಲ ಹೋಗಿವೆ. ರಾಷ್ಟ್ರಧ್ವಜ ಒಂದೇ ಇರಬೇಕು. ಮರಾಠಿ ಧ್ವಜವನ್ನು ಯಾವಾಗ ತೆಗೆದು ಹಾಕುತ್ತಾರೆನ್ನುವ ಸ್ಪಷ್ಟ ಉತ್ತರ ಬೇಕು. ಆ ಬಾವುಟವನ್ನು ಯಾವತ್ತು ತೆಗೆಯುತ್ತಾರೆ ? ಬೆಳಗಾವಿ ಮಹಾನಗರ ಪಾಲಿಕೆಗೆ ಚುನಾವಣೆ ನಡೆದರೆ ನಮಗೆ ಒಳ್ಳೆ ಆನ್ಯಾಯವಾಗುತ್ತದೆ. ಅಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿ ಅಧಿಕಾರಕ್ಕೆ ಬರುತ್ತದೆ. ಅಲ್ಲಿನ ಕನ್ನಡಿಗರಿಗೆ ಕನ್ನಡದ ಅಭಿಮಾನ ಹೋಗುತ್ತದೆ. ಈ ಬಗ್ಗೆ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡು ಹೇಳಬೇಕು.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ಎರಡು ವಿಚಾರಗಳನ್ನು ತರುತ್ತೇನೆ. ನಿನ್ನೆ ದಿವಸ ಮಾನ್ಯ ಪುಟ್ಟಸ್ವಾಮಿಗೌಡರು ಪಾರ್ಲಿಮೆಂಟ್.....

ಶ್ರೀ ವಾಟಾಳ್‌ನಾಗರಾಜ್.—ಮಾನ್ಯ ಅಧ್ಯಕ್ಷರೆ, ನಾನು ಧರಣಿ ಕುಳಿತುಕೊಳ್ಳುತ್ತೇನೆ. ಇದರಿ ಬಹಳ ಅನ್ಯಾಯ.

(ಈ ಹಂತದಲ್ಲಿ ಮಾನ್ಯ ಸದಸ್ಯರು ತಮ್ಮ ಪೀಠದಿಂದ ಹೊರಗೆ ಬಂದು ಸಭಾಧ್ಯಕ್ಷರ ಪೀಠದ ಮುಂಭಾಗದಲ್ಲಿ ಧರಣಿ ಕುಳಿತರು)

(ಮಾನ್ಯ ಸದಸ್ಯರಾದ ಎಂ. ಪಿ. ವೆಂಕಟೇಶ್‌ರವರು ಕೂಡ ಅವರನ್ನು ಅನುಕರಿಸಿದರು)

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಈಗಾಗಲೇ ಅಲ್ಲಿ ಆಡಳಿತಾಧಿಕಾರಿ ಅವರ ಅಧಿಕಾರವಿದೆ. ಸರ್ಕಾರ ಈ ಬಗ್ಗೆ ಒಂದು ಸ್ಟೇಟ್ ಮೆಂಟ್ ಮಾಡಬೇಕಾಗುತ್ತದೆ. ಇದು ಬಹಳ ಗಂಭೀರವಾದ ಸಮಸ್ಯೆ ಇದೆ. ಅಲ್ಲಿ ಮರಾಠಿ ಬಾವುಟವಿದ್ದರೆ ಸರ್ಕಾರ ಈ ಬಗ್ಗೆ ಒಂದು ಸ್ಟೇಟ್ ಮೆಂಟ್ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಈಗ ಉತ್ತರ ಹೇಳುತ್ತಿದ್ದಾರೆ. ತಾವು ಇಲ್ಲಿ ಏತಕ್ಕೆ ಕಾಳತಿದ್ದೀರಿ ? ಇದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ನಮ್ಮ ಪರಿಸ್ಥಿತಿಯನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನಮಗೆ ಹೇಳಿಕೆ ಕೊಡಲಿಕ್ಕೆ ಅವಕಾಶ ಕೊಡಲಿಲ್ಲ. ನಾನು ತಮ್ಮ ಅಪ್ಪಣೆ ಪಡೆದು ಎದ್ದು ನಿಂತು ಸಪ್ಲಿಮೆಂಟರಿ ಉತ್ತರ ಕೊಡಬೇಕೆನ್ನುವಷ್ಟರಲ್ಲಿ ಮಾನ್ಯ ಸದಸ್ಯರು ಮಾತ ನಾಡುತ್ತಾ, ಮಾತನಾಡುತ್ತಾ ತಮ್ಮ ಪೀಠದ ಎದುರಿಗೆ ಬಂದು ಬಿಟ್ಟರು. ಈ ತರಹ ಪರಿಸ್ಥಿತಿ ಬಂದರೆ ಹೇಗೆ ?

(ಈ ಹಂತದಲ್ಲಿ ಧರಣಿ ಕುಳಿತ ಮಾನ್ಯ ಸದಸ್ಯರುಗಳು ತಮ್ಮ ಪೀಠಗಳಿಗೆ ವಾಪಸ್ಸಾದರು)

ಶ್ರೀ ಕೆ. ಪೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ಬೆಳಗಾವಿ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳಿಗಿಂತ ಕನ್ನಡದ ಬಗ್ಗೆ ಹೆಚ್ಚು ಅಭಿಮಾನವಿರುವ ಪಾಟಾಳ್ ನಾಗರಾಜ್ ಮತ್ತು ಪಾಟೀಲ್ ಪುಟ್ಟಪ್ಪನವರನ್ನು ಅಲ್ಲಿ ನಿಲ್ಲಿಸಿದರೆ ಅವರು ಮತ್ತು ಇತರೇ ಕನ್ನಡಿಗರು ಹೆಚ್ಚು ಸಂಖ್ಯೆಯಲ್ಲಿ ಆರಿಸಿ ಬರುವ ಸಂಭವವಿದೆ. ಆ ಕೆಲಸವನ್ನು ಮಾಡಬೇಕೆಂದು ಮಾನ್ಯ ಮೊಯಿಲಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರಾದ ಪಾಟಾಳ್ ನಾಗರಾಜ್‌ರವರು ಕನ್ನಡದ ಬಗ್ಗೆ ಹೋರಾಟ ಮಾಡಿದವರು, ಹೋಚಳುವಳಿ ಮಾಡಿದವರು. ಕನ್ನಡದ ಧ್ವಜವನ್ನು ಯಾವಾಗಲೂ ಕೂಡ ಎತ್ತರಕ್ಕೆ ಹಾರಿಸಬೇಕೆಂದು ಹೇಳಿ ಮನಸ್ಸು ಮಾಡಿದವರು. ಇದರ ಬಗ್ಗೆ ನಮಗೆ ಏನೂ ಇಲ್ಲ. ಪ್ರಶ್ನೆ ಇಲ್ಲಿ ಸೀಮಿತವಾಗಿ ಉಳಿದಿದೆ. ಚುನಾವಣಾ ವಿಚಾರ, ಚುನಾವಣೆ ಪ್ರಕ್ರಿಯೆ ಬಿಡುಗಡೆಯಾಗಿದೆ. ಚುನಾವಣೆಯನ್ನು ನಿಲ್ಲಿಸತಕ್ಕಂಥ ಪ್ರಶ್ನೆ ನಾವು ಮಾಡುವುದಕ್ಕೆ ಬರುವುದಿಲ್ಲ. ಅದಕ್ಕಾಗಿ ನಾನು ನಿನ್ನೆ ಈ ವಿಚಾರವನ್ನು ಹೇಳಿದೆ. ಬಹುಶಃ ತಾವು ನೆನಪು ಮಾಡಿಕೊಳ್ಳಬೇಕು. ನಾನು ಸ್ಪಷ್ಟವಾಗಿ ಹೇಳಿದೆ ಈಗ ಒಂದು ವೇಳೆ...

ಶ್ರೀ ಪಾಟಾಳ್ ನಾಗರಾಜ್.—ಬೆಳಗಾವಿ ನಗರಸಭೆಯಲ್ಲಿ ಕನ್ನಡದ ವಿರೋಧಿಯಾಗಿ ವರ್ತಿಸುತ್ತಿದ್ದಾರೆ, ಹೀಗಾದರೆ ನಾವು ಬಹಳ ತೊಂದರೆಗೆ ಸಿಕ್ಕುತ್ತೇವೆ. ಇಲ್ಲದಿದ್ದರೆ ನಾವು ನಮ್ಮ ಹಿತ ಕಾಪಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ನಿಂತುಕೊಂಡಾಗ ನಾನು ನಿಲ್ಲುವುದಕ್ಕೆ ತಯಾರಿಲ್ಲ. ಈ ಸೌಜನ್ಯತೆಯನ್ನು ನಾನು ಕಾಪಾಡಿಕೊಂಡು ಹೋಗುತ್ತೇನೆ. ನನಗೆ ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ. ಚುನಾವಣೆ ವಿಚಾರ ಬಂದಾಗ ಇಲ್ಲಿ ನಿನ್ನೆ ನಾನು ಪ್ರಸ್ತಾಪ ಮಾಡಿದ್ದೆ. ಎಲ್ಲರೂ, ಇಡೀ ಸದನ ಆ ಕಡೆಯವರು ಈ ಕಡೆಯವರು ಒಂದು ವಿಚಾರಕ್ಕೆ ರಾಜಕೀಯ ಮಾಡುವುದು, ಮತ್ತೊಂದು ವಿಚಾರಕ್ಕೆ ಜೇಡ ಏನ್ನುವುದು. ಈ ರೀತಿ ಭೇದ ಮಾಡುವುದಕ್ಕೆ ಆಗುವುದಿಲ್ಲ. ಆ ರೀತಿ ಡಿಲಿಮಿಟೇಶನ್ ಮಾಡಬೇಕೆಂದು ಎಲ್ಲರ ಅಭಿಪ್ರಾಯ ಆಗಿದ್ದರೆ ನಾವು ಚುನಾವಣೆ ಮುಂದಕ್ಕೆ ಹಾಕಬೇಕೆಂದು ಆಗಿದ್ದರೆ ಸರ್ಕಾರ ಅದಕ್ಕೆ ತಲೆಯಾಗುತ್ತದೆ. ಆದರೆ ಒಂದು ಕಾರ್ಪೊರೇಷನ್‌ಗೆ ಒಂದು ತರಹ ಮತ್ತೆ ಇನ್ನೊಂದು ಕಾರ್ಪೊರೇಷನ್‌ಗೆ ಇನ್ನೊಂದು ತರಹ ಟ್ರೀಟ್‌ಮೆಂಟ್ ಕೊಟ್ಟರೆ ತಮಗೆ ಗೊತ್ತಿದೆ, ನಮ್ಮ ಹಸ್ತಿರದಲ್ಲೇ ಕೆಂಪು ಕಟ್ಟಡ ಇದೆ. ಆಮೇಲೆ ನಮ್ಮ ಮುಂದಕ್ಕೆ ಮಂಗಳಾರತಿ ಆಗತಕ್ಕಂಥ ಪರಿಸ್ಥಿತಿ ಬರುತ್ತದೆ. ಕಾನೂನಿನಲ್ಲಿ ಈ ರೀತಿ ಮಾತನಾಡುವುದಕ್ಕೆ ಆಗುವುದಿಲ್ಲ. We cannot distinguish between one Corporation and another. ಏಕೆಂದರೆ ಅಲ್ಲಿ ಮರಾಠಿಗರು ಬರುತ್ತಾರೆ. ಆದ್ದರಿಂದ ಅಲ್ಲಿ ಚುನಾವಣೆ ಮಾಡಬೇಡಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇಲ್ಲಿ ಕನ್ನಡಿಗರು ಬರುತ್ತಾರೆ, ಇಲ್ಲಿ ಚುನಾವಣೆ ಮಾಡಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇದನ್ನು ತಮ್ಮ ಆದೇಶಕ್ಕೆ ಬಿಟ್ಟಿದ್ದೇನೆ. ಈ ಅಂಶವನ್ನು ವಿಚಾರ ಮಾಡುವುದಕ್ಕೆ ಬರುವುದಿಲ್ಲ. ಇನ್ನು ಎರಡನೆಯದಾಗಿ, ಬೆಳಗಾವಿ ಹಿತದೃಷ್ಟಿಯಿಂದ ಎಲ್ಲಾ ಚುನಾವಣೆಗಳನ್ನು

ಮುಂದಂವರೆಸಿ ಅಥವಾ ಡಿಲಿಮಿಟೇಶನ್ ಮಾಡಿಕೊಂಡು ಆಮೇಲೆ ಮಾಡಿ ಎಂದು ಎಲ್ಲರೂ ಸದನದ ಒಪ್ಪಿಗೆಯಾಗಿದ್ದರೆ ಸರ್ಕಾರ ಬಹುಶಃ ಆ ಬಗ್ಗೆ ಮರುಚಿಂತನೆ ಮಾಡಬಹುದು. ಇದಕ್ಕೆ ಯಾರೂ ಸಹಕಾರ ಕೊಡುವುದಕ್ಕೆ ತಯಾರಿಲ್ಲ. ಅಥವಾ ಒಮ್ಮತದ ಅಭಿಪ್ರಾಯಕ್ಕೆ ಬರುವುದಕ್ಕೆ ಸಹ ಯಾರೂ ತಯಾರಿಲ್ಲ. ತಾವು ಕೂಡ ವಿರೋಧಪಕ್ಷದ ಸದಸ್ಯರಾಗಿದ್ದೀರಿ. ವಿರೋಧ ಪಕ್ಷದ ನಾಯಕರು ತಮ್ಮ ಬೇಡಿಕೆಯ ಬಗ್ಗೆ ಎಷ್ಟು ಪಂಂದಾಳುತನ ವಹಿಸಿಕೊಂಡು ತಮ್ಮ ಬೇಡಿಕೆಯನ್ನು ಈಡೇರಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ ಎಂಬ ಬಗ್ಗೆ ಮೊದಲು ಅವರನ್ನು ವಿಚಾರಿಸಿ. ನಿಮ್ಮೊಳಗೆ ಒಪ್ಪಂದ ಆದರೆ ಆ ಮೇಲೆ ವಿಚಾರ ಮಾಡೋಣ, ಇನ್ನು ಎರಡನೆಯದು, ಬಾವುಟದ ವಿಚಾರ. ಕಳೆದ ಅಧಿವೇಶನದಲ್ಲಿ ಕೂಡ ಈ ವಿಚಾರವನ್ನು ಇದೇ ಶಾಸಕರು ಎತ್ತಿದ್ದರು ಬಹಳ ದಿವಸಗಳಿಂದ, ಇದು ಒಂದೆರಡು ತಿಂಗಳ ಪ್ರಶ್ನೆ, ಒಂದೆರಡು ವರ್ಷದ ಪ್ರಶ್ನೆ ಅಲ್ಲ. ಬಹುಶಃ ಅನೇಕ ವರ್ಷಗಳಿಂದ ಮಾಡುತ್ತಿದ್ದಾರೆ. ಇದು ಎಷ್ಟು ಸಮಂಜಸವೋ, ಎಷ್ಟು ಸಮಂಜಸ ಅಲ್ಲವೋ ಗೊತ್ತಿಲ್ಲ. ಬಹುಶಃ ಇದರ ಬಗ್ಗೆ Code of Conduct ಮಾಡಲೇಬೇಕಾ. ಇದಕ್ಕೆ ಒಂದೊಂದು ಪಕ್ಷ ಅಧಿಕಾರಕ್ಕೆ ಬಂದಾಗ ಮುನಿಸಿಪಾಲಿಟಿ, ಕಾರ್ಪೊರೇಷನ್‌ಗಳಲ್ಲಿ ಅವರ ಪಕ್ಷದ ಧ್ವಜವನ್ನು ಹಾರಿಸತಕ್ಕದ್ದು ಅಥವಾ ಅವರಿಗೆ ಸೀಮಿತ ವಾಹನ ಎಲ್ಲೆಲ್ಲಿ ಹಾರಿಸತಕ್ಕದ್ದು ಇದೆ. ಈ ಬಗ್ಗೆ ನಾವು Code of Conduct ಮಾಡಲೇ ಮಾಡಬೇಕು. ಹಾಗೂ ಇದಕ್ಕೆ ಸಂಬಂಧ ಪಟ್ಟಂತೆ ಒಂದು ಲೆಜಿಸ್ಲೇಷನ್ ತರಬೇಕೆಂದು ಕೂಡ ಸಮಗೆ ಆಸಕ್ತಿ ಇದೆ. ಅದನ್ನು ನಾವು ತಯಾರು ಮಾಡುತ್ತಿದ್ದೇವೆ. ಏಕೆಂದರೆ ಯಾವ ಒಂದು ಜಿಲ್ಲಾ ಪರಿಷತ್ತಿನಲ್ಲಿ ಆಗಲೀ, ಒಂದು ಕಾರ್ಪೊರೇಷನ್‌ನಲ್ಲಿಯಾಗಲೀ ಒಂದು ಸಂಸ್ಥೆಯಾಗಲಿ, ಲೋಕಲ್‌ಬಾಡಿಗೆ ಸಂಬಂಧಪಟ್ಟ ಸಂಸ್ಥೆಗಳು ಯಾವ ಧ್ವಜ ಹಾರಿಸಬೇಕು, ಎಷ್ಟು ಎತ್ತರಕ್ಕೆ, ಯಾವ ಪಟ್ಟಪಲ್ಲಿ ಹಾರಿಸಬೇಕೆಂ ಎಂಬ ಬಗ್ಗೆ ನಾವು ಕೋಡ್ ಆಫ್ ಕಂಡಕ್ಟ್ ತಯಾರು ಮಾಡುತ್ತಿದ್ದೇವೆ. ಇದಕ್ಕೆ ಕಾನೂನು ಮಾಡ ಬೇಕಾಗುತ್ತದೆ. ಈ ಬಗ್ಗೆ ಸದಸ್ಯರು ಹೇಳಿದಂಥ ವಿಚಾರವನ್ನು ಗಂಭೀರವಾಗಿ ಸರ್ಕಾರ ಪರಿಗಣಿಸಿದೆ. ಬಹಳ ವರ್ಷಗಳಿಂದ ಆಲ್ಲಿರುವಂಥ ಈ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಸರ್ಕಾರಕ್ಕೆ ಬಹಳ ಕಳಕಳಿ ಇದೆ. ಈ ಬಗ್ಗೆ ಏನು ಕಾರ್ಯಕ್ರಮ ಮಾಡೋಬೇಕೋ ಅದನ್ನು ಬರೆಂವ ಸದನದಲ್ಲಿ, ಇದಕ್ಕೆ ಸೂಕ್ತ ಕಾರ್ಯಕ್ರಮ ಒದಗಿಸಲಿಕ್ಕೆ, ಇದಕ್ಕೆ ಒಂದು ಕೋಡ್ ಆಫ್ ಕಾಂಡಕ್ಟ್ ಮಾಡಲಿಕ್ಕೆ ನಾವು ಸೂಕ್ತವಾದಂಥ ಒಂದು ಮಸೂದೆಯನ್ನು ತರುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಧ್ವಜವನ್ನು ಎಲ್ಲೆಲ್ಲಿ ಹಾಕಬೇಕು ಎಂದೂ ಕೇಂದ್ರಸರ್ಕಾರದ ನೀತಿ ಇದೆ. ಹೊಸದಾಗಿ ಕಾಯಿದೆ ಥರಾಡಬೇಕಾಗಿಲ್ಲ. ಯಾವ್ಯಾವ ಕಟ್ಟಡಗಳಲ್ಲಿ ಏನು ಧ್ವಜ ಹಾಕಬೇಕೆಂದು ಕೇಂದ್ರಸರ್ಕಾರದ ನಿಯಮ ಇದೆ. ಅಲ್ಲಿ ಮರಾಠಿ ಧ್ವಜ ಹಾಕತಕ್ಕದ್ದು ಎಂದೆಂದೂ ಇಲ್ಲ. ಮರಾಠಿ ಧ್ವಜ ಆಲ್ಲಿರುವುದು ತಪ್ಪಾಗಿದೆ ಎಂದೂ ಸರ್ಕಾರಕ್ಕೆ ಗೊತ್ತಿದೆ. ಸರ್ಕಾರಕ್ಕೆ ಗೊತ್ತಾದ ಮೇಲೆ ನಿಯಮ ಗಳನ್ನು ನೀವು ಮಾಡುವುದಾದರೆ ಇನ್ನೊಂದು ನಿಯಮ ಮಾಡಲಿ. ಈಗ ಕೇಂದ್ರ ಸರ್ಕಾರದ ನಿಯಮವೇ ಇದೆ. ಆದ್ದರಿಂದ ಕೂಡಲೇ, ನಾಳೆಯೇ ತತ್‌ಕ್ಷಣ ಪೋಲೀಸ್ ಅಥವಾ ಸಿಬ್ಬಂದಿ ಕಳಿಸಿ ಆ ಬಾವುಟವನ್ನು ತೆಗೆಯುತಕ್ಕಂಥ ವ್ಯವಸ್ಥೆ ಮಾಡುವುದಕ್ಕೆ ಹೇಳಂತ್ತೀರಾ?

೧–೦೦ ಪಿ.ಎಂ.

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ಏನು ಹೇಳಿದ್ದಾರೆ; ಕೇಂದ್ರದ್ದು ನಿಯಮ ಇದೆ. ಕೇಂದ್ರದ್ದು ಫ್ಲಾಗ್ ರೂಲ್ಸ್ ಎಂದು ಇದೆ. ಆದರೆ ಈ ಫ್ಲಾಗ್ ರೂಲ್ಸ್ ಪ್ರಕಾರ, ಇಂತಹ ಸಂಸ್ಥೆಗಳ ಮೇಲೆಯೇ ಯಾವ ಫ್ಲಾಗ್ ಹಾರಿಸಬೇಕೆಂದು ಇಲ್ಲ. ನಾನು ಪರಿಶೀಲನೆ ಮಾಡಿದ್ದೇನೆ. ಆದರೆ ರಾಷ್ಟ್ರೀಯ ಧ್ವಜ ಹಾರಿಸಬಹುದು. ಆದರ ಜೊತೆಗೆ ಇನ್ನೊಂದು ಧ್ವಜ ಹಾರಿಸಿದರೆ, there is no prohibition there. Flag rules will not take care of all these problems.

ಶ್ರೀ ಆರ್. ವಿ. ದೇವಪಾಂಡೆ.—ಶಾಸನ ತರುವ ಅವಶ್ಯಕತೆ ಇದ್ದರೆ ತನ್ನಿ, ಸಂತೋಷ. ಆದರೆ ಇವತ್ತಿನ ದಿವಸ ಆ ಕಾರ್ಪೊರೇಷನ್ ಅಡ್ಮಿನಿಸ್ಟ್ರೇಟರ್ ಕೈಯಲ್ಲಿದೆ. ಆಲ್ಲಿನ ಧ್ವಜ ತೆಗೆಯುವುದಕ್ಕೆ ಏನು ತೊಂದರೆ ಇದೆ...ನೀವು ಡೈರಕ್ಷನ್ ಕೊಡಿ.

ಶ್ರೀ ಎಸ್. ಹೆಚ್. ಕೌಜಲಗಿ.—ನಿನ್ನೆಯ ದಿವಸ ಬೆಂಗಳೂರು ಮಹಾನಗರದಲ್ಲಿ, ಕನ್ನಡಿಗರು ಕನ್ನಡ ಧ್ವಜ ಹಾರಿಸುವ ಕಾಲಕ್ಕೆ ಏಕೆ ಅರೆಸ್ಟ್ ಮಾಡಿದ್ದೀರಿ, ಇಲ್ಲಿ ಈ ಕೆಲಸ ಮಾಡಿದಮೇಲೆ, ಅಲ್ಲಿ ಏಕೆ ಮಾಡುವುದಿಲ್ಲ. ಬೆಂಗಳೂರಿನಲ್ಲಿ ಕನ್ನಡ ಧ್ವಜ ಹಾರಿಸುವುದಕ್ಕೆ ಬರುವುದಿಲ್ಲ, ಅಲ್ಲಿ ಅವರು ಧ್ವಜ ಹಾರಿಸುವುದಕ್ಕೆ ಬರುತ್ತದೆಯೇ? ಹಾಗಾದರೆ ಇವತ್ತಿನದಿವಸ ಇಲ್ಲಿಯೂ ಕನ್ನಡ ಧ್ವಜ ಹಾರಿಸುವುದಕ್ಕೆ ಪರವಾನಗಿ ಕೊಡಿ. ಇಲ್ಲಿ ಏತಕ್ಕೆ ತೆಗೆಯಬೇಕು?

ಶ್ರೀ ಎಂ. ವೀರಪ್ಪಮೊಯ್ಲಿ.—ಪಾಪ್ಯ ದೇಶಪಾಂಡೆಯವರು ಸೊನ್ನೆ ಸೊನ್ನೆಯವರೆಗೂ ಸರ್ಕಾರದಲ್ಲಿ ಇದ್ದರು. ಆಗ ಪಾಪ್ಯ ಕೌಜಲಗಿಯವರು ಅಗಿನ ಸರ್ಕಾರಕ್ಕೆ ಈ ಬಗ್ಗೆ ಏಕೆ ಸಪೋರ್ಟ್ ಮಾಡಲಿಲ್ಲ. ಏಕೆ ಈ ವಿಚಾರ ಕೇಳಲಿಲ್ಲ. ಆಗ ಅಧಿಕಾರ ಇರಲಿಲ್ಲವೇ?

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್.—ಆ ಸರ್ಕಾರ ತೆಗೆಯಲಿಲ್ಲ ಎಂದು ಹೇಳಿ, ನೀವೂ ಅದೇ ರೀತಿ ಮಾಡುತ್ತೀರಾ...

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ,—ನಾವು ಕೆಲವು ತಪ್ಪು ಮಾಡಿರುವುದರಿಂದ ಇಲ್ಲಿ ಬಂದಿದ್ದೇವೆ, ಇವತ್ತಿನದಿನದ ಅಲ್ಲಿ ಅಡ್ಮಿನಿಸ್ಟ್ರೇಟಿವ್ ರೂಲ್ ಇದೆ...

(ಗೊಂದಲ)

ಶ್ರೀ ಬಿ.ಎಸ್ ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಮೊನ್ನೆ ಕನ್ನಡದ ಧ್ವಜ ಹಾರಿಸಿದವರನ್ನು ಅರೆಸ್ಟ್ ಮಾಡಿದ್ದಾರೆ, ಇದು ಖಂಡಿತಾ ಸರಿಯಲ್ಲ. ತಪ್ಪು ಎಂದು ಹೇಳಿದ್ದಾರೆ, ಇದಕ್ಕೆ ನಾನೂ ಬೆಂಬಲ ಸೂಚಿಸುತ್ತೇನೆ. ನಾನು ಈ ಬಗ್ಗೆ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾವು ಈ ಸದನದಲ್ಲಿ ಕುಳಿತುಕೊಂಡು ನೀವು ಏನು ಮಾಡಿದ್ದೀರಿ, ನೀವು ಏಕೆ ಮಾಡಲಿಲ್ಲ ಆದ್ದರಿಂದ ನಾವೂ ಮಾಡಿದ್ದಿಲ್ಲ ಎನ್ನುತಕ್ಕಂಥ ಕತ್ತೆ ಕೇಳಿ ಕೇಳಿ ನಾವು ತಲೆ ತಗ್ಗಿಸಬೇಕಂಥ ಸ್ಥಿತಿ ಬಂದಿದೆ. ಅವರು ಮಾಡಬಾರದ್ದು ಮಾಡಿದರು, ಅದಕ್ಕೋಸ್ಕರ ಇಲ್ಲಿಗೆ ಬಂದಿದ್ದಾರೆ, ನೀವೂ ಅದನ್ನೇ ರಿಪೀಟ್ ಮಾಡಂಥಂತಾಗಬಾರದು. ತಮ್ಮ ಕಾಲದಲ್ಲಿ ಏನಾದರೂ ಒಂದು ಮೇಲ್ಪಂಕ್ತಿ ಹಾಕಿ, ದಯಮಾಡಿ ಹಳೆಯದನ್ನು ದಯಮಾಡಿ ಹೇಳಬೇಡಿ.

(ಗೊಂದಲ)

ಅಧ್ಯಕ್ಷರು.—ನೀವು ಮಾಡಲಿಲ್ಲ. ನಾವು ಮಾಡಲಿಲ್ಲ ಎನ್ನುವ ಪ್ರಶ್ನೆಗಿಂತ, ಯಾವುದು ಸರಿ ಎನ್ನುವುದು ತೀರ್ಮಾನ ಆಗಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ಆ ಮಾತು ಪೂರ್ತಿ ಸತ್ಯ. ಏನು ಸರಿ ಇದೆಯೋ ಅದನ್ನು ಈಗ ಮಾಡೋಣ. ಇಷ್ಟರವರೆಗೆ ಅಂದರೆ ೩೦-೩೫ ವರ್ಷಗಳಲ್ಲಿ ಏನೂ ಮಾಡುವುದಕ್ಕಾಗಲಿಲ್ಲವೋ ಅದನ್ನು ನಾವು ಮಾಡುತ್ತಿದ್ದೇವೆ. ಈಗ ಪ್ರಶ್ನೆ ಏನೆಂದರೆ, ಇದು ಇವತ್ತು ನಿನ್ನೆಯ ಮಾತಲ್ಲ. ಅನೇಕ ವರ್ಷಗಳಿಂದ ಇದು ನಡೆದುಕೊಂಡು ಬಂದಿದೆ. ಅಲ್ಲಿ ಆಡಳಿತಾಧಿಕಾರಿಗಳು ಬಂದು ಎರಡು ವರ್ಷವಾಗಿದೆ.

(ಗೊಂದಲ)

ಶ್ರೀ ಪಾಟೀಲ್ ನಾಗರಾಜ್.—ಅಲ್ಲಿ ಬೆಳಗಾವಿ ಮಹಾರಾಷ್ಟ್ರಕ್ಕೆ ಹೋಗಬೇಕೆಂದು ನಿರ್ಣಯ ಮಾಡಿದ್ದಾರೆ ಅದನ್ನು ಸಹ ಮಾಡಿದ್ದಾರೆ....

ಅಧ್ಯಕ್ಷರು.—ಸರ್ಕಾರದವರು ಈ ಬಗ್ಗೆ ಹೇಳಿದ್ದಾರೆ, ಈ ಬಾವುಟದ ಬಗ್ಗೆ ಒಂದು ಮಸೂದೆಯನ್ನು ತರುತ್ತೇವೆಂದು ಹೇಳಿದ್ದಾರೆ. ಅದನ್ನು ನಾವು ಎದುರು ನೋಡೋಣ.

ಶ್ರೀ ಪಾಟೀಲ್ ನಾಗರಾಜ್.—ತಪ್ಪಿಲ್ಲ ಮನವಿ ಮಾಡಿಕೊಳ್ಳುತ್ತೇನೆ. ಈ ಮಸೂದೆಯನ್ನು ಯಾವತ್ತು ತರುತ್ತೀರಿ ಎನ್ನುವುದನ್ನು ಹೇಳಲಿ. ಅದನ್ನು ಈ ಸದನದಲ್ಲಿ ಅವರು ಹೇಳಲಿ.

ಅಧ್ಯಕ್ಷರು.—ಪಾಟೀಲ್ ನಾಗರಾಜ್‌ರವರೇ ನೀವೇನೂ ಹೊಸ ಸದಸ್ಯರಲ್ಲ, ಯಾವುದಾದರೂ ಸರಕಾರ ಕಳೆದ ೪೪ ವರ್ಷಗಳಲ್ಲಿ ಇಂತಹದೇ ದಿವಸ ಮಸೂದೆ ತರುತ್ತೇವೆ ಎಂದು ಹೇಳುವುದಕ್ಕೆ ಸಾಧ್ಯವೇ? ಶೀಘ್ರದಲ್ಲಿ ತರುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಪಾಟೀಲ್ ನಾಗರಾಜ್.—ತಾವು ಪಾರ್ಲಿಮೆಂಟ್‌ನಲ್ಲಿದ್ದವರು, ಈ ಧ್ವಜದ ಬಗ್ಗೆ ಕೇಂದ್ರ ಸರಕಾರದ ಒಂದು ನೀತಿ ನಿಯಮಗಳು ಇದೆ. ಇದನ್ನು ರಾಜ್ಯ ಸರಕಾರಗಳೆಲ್ಲ ಅನುಸರಿಸಬೇಕು. ಹೊಸದಾಗಿ ಕಾಯಿದೆ ತರಬೇಕಾಗಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಇವರದ್ದೇ ಆದ ಒಂದು ಧ್ವಜ ಇದೆ, ಅದನ್ನು ಏನು ಮಾಡುವುದು?

ಶ್ರೀ ಸಿ. ಬೈರೇಗೌಡ.—ಅದನ್ನು ಎಲ್ಲೂ ಹಾಕಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಬೆಳಗಾವಿ ಗಡಿ ಪ್ರದೇಶದಿಂದ ಬಂದವರು ನಾವು, ಅಲ್ಲಿ ಅಂತಹದೇನೂ ತೊಂದರೆ ಇಲ್ಲ. ಇಂತಹ ಜನ ಬಂದು ತೊಂದರೆ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಧ್ವಜದ ಪ್ರಶ್ನೆ ಮುಂಗಿಯಿತು.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ ದಯವಿಟ್ಟುನೋಡಿ, ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಿದ್ದು ಎಂದೂ ಅಲ್ಲಿರುವ ಕೇಂದ್ರ ಸರ್ಕಾರದ ಅಧಿಕಾರಿಗಳು ಪತ್ರ ಬರೆಯುತ್ತಾರೆ. ಬೆಳಗಾವಿ ದಿಕ್ಕೆಟ್ಟು ಹೋಗಿದೆ, ಬೆಳಗಾವಿ ಕನ್ನಡಿಗರು ತಬ್ಬಲಿಗಳಾಗಿದ್ದಾರೆ. ಸರಕಾರ ಬೆಳಗಾವಿಯನ್ನು ಸಂಪೂರ್ಣವಾಗಿ ಕಡೆಗಣಿಸಿದೆ. ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಿದ್ದು ಎಂದು ಕಾಗದ ಪತ್ರಗಳನ್ನು ಬರೆದಿದ್ದಾರೆ. ಅಲ್ಲಿಗೆ ಕನ್ನಡ ಅಧಿಕಾರಿಗಳನ್ನು ಹಾಕುತ್ತಿಲ್ಲ, ಮರಾಠಿ ಅಧಿಕಾರಿಗಳನ್ನು ಹಾಕುತ್ತೀರಿ ಅವರಿಗೆ ಮರಾಠಿ ಬಗ್ಗೆ ಬೆಂಬಲ ಇದೆ. ಎಂ. ಇ. ಎಸ್.ಗೆ ಪೂರ್ಣ ಬೆಂಬಲ ಕೊಡುತ್ತಿದ್ದಾರೆ. ಇದನ್ನು ತಮ್ಮ ಗಮನಕ್ಕೆ ತರುತ್ತೇನೆ. ತಮಗೆ ಕೈಮುಗಿದು ಕೇಳುತ್ತಿದ್ದೇನೆ. ೫ ಸಾವಿರ ಜನ ಇಲ್ಲಿಗೆ ಬಂದಿದ್ದಾರೆ. ಸತ್ಯಾಗ್ರಹ ಮಾಡುತ್ತಿದ್ದಾರೆ. ಬೆಳಗಾವಿ ನಗರದ ಹಿತದೃಷ್ಟಿಯಿಂದ ಅಲ್ಲಿನ ನಗರಸಭೆ ಚುನಾವಣೆಗಳನ್ನು ಮುಂದೂಡಿ...

ಅಧ್ಯಕ್ಷರು.—ಅವರು ಹೇಳುತ್ತಿರುವುದು ಯಾವುದೂ ಕಡತಕ್ಕೆ ಹೋಗಬೇಕಾದುದು ಇಲ್ಲ.

(ಗೊಂದಲ)

ಅಧ್ಯಕ್ಷರು.—ನಾನು ಎಲ್ಲ ಸದಸ್ಯರುಗಳಿಗೂ ಕೂಡ ಸಮಾನ ಅವಕಾಶವನ್ನು ಕೊಡುತ್ತೇನೆ ಎಂದು ನನ್ನನ್ನು ಚುನಾವಣೆ ಮಾಡಿದ ದಿವಸ ಈ ಸಭೆಗೆ ಭರವಸೆ ಕೊಟ್ಟಿದ್ದೇನೆ. ಒಬ್ಬ ಸದಸ್ಯರು ಇಡೀ ಸದನವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬಾರದು...

ಶ್ರೀ ವಾಟಾಳ್ ನಾಗರಾಜ್.—ನಮಗೆ ಆ ಭಾವನೆ ಇಲ್ಲ. ತಮಗೆ ಗೌರವ ಕೊಡುತ್ತಿದ್ದೇನೆ. ನಾನು ಎಂದೆಂದೂ ತಮಗೆ ಗೌರವ ಕೊಟ್ಟು ಮಾತನಾಡಿದ್ದೇನೆ.

ಅಧ್ಯಕ್ಷರು.—ಧ್ವಜದ ವಿಚಾರದ ಬಗ್ಗೆ ಹೇಳಲು ನಿಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ನಾನು ಏನು ಹೇಳುತ್ತೇನೆ ಎಂದರೆ ಮಾನ್ಯ ಸಚಿವರು.....

MR. SPEAKER.—Nothing will go on record. ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಮಂತ್ರಿಗಳು ಮಸೂದೆಯನ್ನು ಮಂಡಿಸಬಹುದು.

(ಗೊಂದಲ)

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಸರಕಾರದ ನಿಲುವನ್ನು ವಿರೋಧಿಸಿ ಸಭಾ ತ್ಯಾಗ ಮಾಡಿದರು).

(ಗೊಂದಲ)

ಶ್ರೀ ಸಿ. ಬೈರೇಗೌಡ.—ತಮ್ಮ ಗಮನಕ್ಕೆ ತರುವ ವಿಷಯ ಏನೆಂದರೆ, ನಿನ್ನೆ ದಿವಸ ಮಾನ್ಯ ವಿದ್ಯುತ್ ಮಂತ್ರಿಗಳು ಪವರ್ ಕಟ್ ಬಗ್ಗೆ ಸರಕಾರ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸುತ್ತದೆ ಅದನ್ನು ನನಗೆ ಕೊಡುತ್ತೇನೆ ಎಂದು ಹೇಳಿದ್ದರು.

ಅಧ್ಯಕ್ಷರು.—ಈ ವಿಚಾರವನ್ನು ತಾವು ಮೊದಲೇ ನನಗೆ ತಿಳಿಸಬೇಕಾಗಿತ್ತು.

ಶ್ರೀ ಸಿ. ಬೈರೇಗೌಡ.—ಇದನ್ನು ನಿನ್ನೆಯೇ ತಮ್ಮ ಗಮನಕ್ಕೆ ತಂದಿದ್ದೇನೆ. ಇದು ಇಲ್ಲಿಯವರೆಗೆ ಬಂದಿಲ್ಲ. ಇನ್ನು ಬಜೆಟ್ ಮಂಡನೆ ಮಾಡುವ ಎಲ್ಲಾ ಪುಸ್ತಕಗಳನ್ನೂ ಸದಸ್ಯರಿಗೆ ಒದಗಿಸಿ ಕೊಡಬೇಕಾಗಿರುತ್ತದೆ. ಆದರೆ ಇವತ್ತು ಕೆಲವು ಪುಸ್ತಕಗಳನ್ನು ಒದಗಿಸಿಲ್ಲ. ಇದು ಯಾವುದು ಎಂದರೆ ಸರಕಾರ ಜಿಲ್ಲಾ ಪರಿಷತ್ತುಗಳ ಮೂಲಕ ರಸ್ತೆ ಮತ್ತು ನೀರಾವರಿ, ಎನ್.ಆರ್.ಇ.ಪಿ., ಮಿನಿವಾಟರ್ ಸಪ್ಲೈ ಸ್ಕೀಮ್ ವಿಚಾರಗಳ ಬಗ್ಗೆ ಆನೆಕ್ಚರ್-೧ ಎಂಬ ಪುಸ್ತಕ ಬರುತ್ತದೆ. ಅದನ್ನು ಪ್ರತಿದಿವಸ ಕೇಳುತ್ತಿದ್ದೇನೆ. ಆದರೆ ಅದನ್ನು ಇಲ್ಲಿಯವರೆಗೆ ಒದಗಿಸಿಲ್ಲ. ಅದನ್ನು ಒದಗಿಸದಿದ್ದರೆ ಈ ಸದನದ ಹಕ್ಕು ಉಲ್ಲಂಘನೆ ಆಗುತ್ತದೆ. ಅದನ್ನು ಒದಗಿಸದೇ ಇದ್ದರೆ ಹಕ್ಕು ಉಲ್ಲಂಘನೆ ಸೂಚನೆ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ಹಕ್ಕುಚ್ಯುತಿ ನೋಟಿಸು ಕೊಡಿ,

ಶ್ರೀ ಸಿ. ಬೈರೇಗೌಡ.—ಅಯಿತು ಕೊಡುತ್ತೇನೆ.

ಅಧ್ಯಕ್ಷರು.—ಕೊಡಿ.

ಶಾಸನ ರಚನಾ ಕಾರ್ಯ ಕಲಾಪಗಳು

೧೯೯೦ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತು ತಾಲ್ಲೂಕು ಪಂಚಾಯತ್ ಸಮಿತಿ ಮಂಡಲ್ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ. ಬಸವಲಿಂಗಪ್ಪ(ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ ನಾನು ''೧೯೯೦ರ ಕರ್ನಾಟಕ ಜಿಲ್ಲಾ ಪರಿಷತ್ತು ತಾಲ್ಲೂಕು ಪಂಚಾಯತ್ ಸಮಿತಿ ಮಂಡಲ್ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ (ತಿದ್ದುಪಡಿ) ಮಸೂದೆಯನ್ನು ಮಂಡಿಸಲು ಅನುಮತಿ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.''

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೯೦ರ ಕರ್ನಾಟಕ ಜಿಲ್ಲಾ ಪರಿಷತ್ತು ತಾಲ್ಲೂಕು ಪಂಚಾಯತ್ ಸಮಿತಿಗಳ ಮಂಡಲ್ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ (ತಿದ್ದುಪಡಿ) ಮಸೂದೆಯನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಬಿ. ಬಸವಲಿಂಗಪ್ಪ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) —ಮಾನ್ಯ ಅಧ್ಯಕ್ಷರೇ ''೧೯೯೦ರ ಕರ್ನಾಟಕ ಜಿಲ್ಲಾ ಪರಿಷತ್ತು ತಾಲ್ಲೂಕು ಪಂಚಾಯತ್ ಸಮಿತಿಗಳು ಮತ್ತು ನ್ಯಾಯ ಪಂಚಾಯತ್ ಸಮಿತಿಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ''.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ *

೧೯೯೦ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತು ತಾಲ್ಲೂಕು ಪಂಚಾಯತ್ ಸಮಿತಿ ಮಂಡಲ್ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಬಿ. ಬಸವಲಿಂಗಪ್ಪ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ ನಾನು ೧೯೯೦ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತು ತಾಲ್ಲೂಕು ಪಂಚಾಯತ್ ಸಮಿತಿ ಮಂಡಲ್ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

x x x

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಸರ್ಕಾರದವರು ಈಗ ಪರಿವರ್ತನೆ ಪಂಚಾಯತ್‌ಗಳ ಚುನಾವಣೆ ಬಗ್ಗೆ ಒಂದು ನಿಲುವು ತೆಗೆದುಕೊಂಡಿದ್ದಾರೆ. ಇದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತು. ನಿನ್ನೆಯ ದಿವಸ ಸಹ ಇದೇ ರೀತಿಯ ಬಿಲ್ ಒಂದನ್ನು ತಾವು ಒಪ್ಪಿ ಕೊಂಡಿದ್ದೀರಿ ಹಾಗೂ ಅದನ್ನು ಪಾಸ್ ಮಾಡಿ ಕೊಟ್ಟಿದ್ದೀರಿ. ಅದೇ ರೀತಿ ಈ ಒಂದು ಆಕ್ಟ್ ಕೆಳಗೆ ಈ ಒಂದೂ ತಿದ್ದುಪಡಿ ಬೇಕಾಗಿದೆ. ತಾವು ದಯವಾಡಿ ತಾವು ಇದನ್ನು ಒಪ್ಪಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

---

* Annexure